# ಕುವೆಂಪು ವಿಶ್ವವಿದ್ಯಾನಿಲಯ

ಇಂಜಿನಿಯರಿಂಗ್ ವಿಭಾಗ,
ವಿಶ್ವವಿದ್ಯಾನಿಲಯ ಕಾರ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ-577 451,

---

ಕುವಿ: ಇಂಜಿ: ಕಾನಿಅ: ಟೆಂಡರ್-5: ವಿ.ಮೇ-1: 486 : 2008-09 ದಿನಾಂಕ: 09-09-2009

## ಅಲ್ಪಾವಧಿ ಟೆಂಡರ್ ಪ್ರಕಟಣೆ

ಕುವೆಂಪು ವಿಶ್ವವಿದ್ಯಾನಿಲಯ ವ್ಯಾಪ್ತಿಯ ಸ್ನಾತಕೋತ್ತರ ಕೇಂದ್ರ, ಕಡೂರು ಆವರಣದಲ್ಲಿ ಈ ಕೆಳಗೆ ಕಾಣಿಸಿದ ವಿದ್ಯುತ್ ಕಾಮಗಾರಿಗಾಗಿ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಲ್ಪಟ್ಟ 1ನೇ ದರ್ಜೆ ಅರ್ಹ ವಿದ್ಯುತ್ ಗುತ್ತಿಗೆದಾರರಿಂದ ಮೊಹರು ಬಂದ ಮಾಡಿದ ಶೇಕಡವಾರು ಟೆಂಡರ್‌ನ್ನು ದ್ವಿಪ್ರತಿಯಲ್ಲಿ ಆಹ್ವಾನಿಸಲಾಗಿದೆ.

| ಕ್ರ. ಸಂ | ಕಾಮಗಾರಿಯ ಹೆಸರು | ಟೆಂಡರ್ ಗಿಟ್ಟ ಮೊತ್ತ ರೂ ಗಳಲ್ಲಿ | ಮುಂಗಡ ಠೇವಣಿ (ಇ.ಎಂ.ಡಿ) ರೂ. ಗಳಲ್ಲಿ | ಖಾಲಿ ಟೆಂಡರ್ ಫಾರ್ಮ್ ಫೀ. ರೂಗಳಲ್ಲಿ | ಕೆಲಸ ಪೂರ್ತಿಗೊಳಿಸಲು ಕಾಲಾವಧಿ | ಗುತ್ತಿಗೆದಾರರ ಅರ್ಹತೆ |
|---|---|---|---|---|---|---|
| 01 | ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಕೇಂದ್ರ ಕಡೂರು ಆವರಣದಲ್ಲಿ ನಿರ್ಮಿಸುತ್ತಿರುವ ಆಡಳಿತ ಭವನ ಕಟ್ಟಡಕ್ಕೆ ವಿದ್ಯುತ್ ಕಾಮಗಾರಿ ಮಾಡುವ ಬಗ್ಗೆ | 60,15,065-00 | 1,20,300-00 | 6000-00 +12.5% ತೆರಿಗೆ | 06ತಿಂಗಳು ಮಳೆಗಾಲ ಸೇರಿ | ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ 1ನೇ ದರ್ಜೆ ವಿದ್ಯುತ್ ಗುತ್ತಿಗೆದಾರರು |

1. ಟೆಂಡರ್ ಫಾರಂಗೆ ಅರ್ಜಿಯನ್ನು ಸ್ವೀಕರಿಸುವ ದಿನಾಂಕ: 29-09-2009 ಸಂಜೆ 5-30 ರವರೆಗೆ
2. ಟೆಕ್‌ನಿಕಲ್ ಬಿಡ್ ಪರಿಶೀಲನೆ ದಿನಾಂಕ: 05-10-2009 ಅಪರಾಹ್ನ 3-00 ಗಂಟೆಗೆ
3. ಖಾಲಿ ಟೆಂಡರ್ ಫಾರಂ ವಿತರಿಸುವ ದಿನಾಂಕ: 08-10-2009 ಸಂಜೆ 5-30 ರವರೆಗೆ
4. ಭರ್ತಿ ಮಾಡಿದ ಟೆಂಡರ್‌ಗಳನ್ನು ಸ್ವೀಕರಿಸುವ ದಿನಾಂಕ: 12-10-2009 ಬೆಳಿಗ್ಗೆ 11 ಗಂಟೆಯ ಒಳಗೆ.
5. ಟೆಂಡರ್ ತೆರೆಯುವ ದಿನಾಂಕ: 12-10-2009 ಬೆಳಿಗ್ಗೆ 11-30ಕ್ಕೆ ಅಥವಾ ಕುಲಸಚಿವರು ನಿಗದಿ ಪಡಿಸಿದ ದಿನಾಂಕದಂದು.
6. ಅರ್ಜಿ ಸಲ್ಲಿಸುವ ಗುತ್ತಿಗೆದಾರರು ಲಕೋಟೆ ಮೇಲೆ ಕೆಲಸದ ಹೆಸರು ಜೊತೆಗೆ ಟೆಕ್‌ನಿಕಲ್ ಬಿಡ್ ಎಂದು ನಮೂದಿಸಿ ನಿಗದಿಪಡಿಸಿದ ಇ.ಎಂ.ಡಿ ಮತ್ತು ಅರ್ಜಿ ಶುಲ್ಕವನ್ನು ಅರ್ಜಿ ಸಲ್ಲಿಸುವ ದಿನಾಂಕದಂದು ಡಿ.ಡಿ ರೂಪದಲ್ಲಿ ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ ಇವರ ಹೆಸರಿಗೆ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಜ್ಞಾನ ಸಹ್ಯಾದ್ರಿ ಶಾಖೆ, ಶಂಕರಘಟ್ಟ ಇಲ್ಲಿ ಸಂದಾಯವಾಗುವಂತೆ ಪಡೆದು ಅರ್ಜಿಯನ್ನು ಕಾರ್ಯಪಾಲಕ ಅಭಿಯಂತರರು, ಇಂಜಿನಿಯರಿಂಗ್ ವಿಭಾಗ, ಕುವೆಂಪು ವಿಶ್ವವಿದ್ಯಾನಿಲಯ ಇವರಿಗೆ ಸಲ್ಲಿಸತಕ್ಕದ್ದು. ಅರ್ಜಿ ಸಲ್ಲಿಸುವ ಗುತ್ತಿಗೆದಾರರೆ ಖುದ್ದಾಗಿ ಈ ಕಛೇರಿಗೆ ಭೇಟಿ ನೀಡಿ ತಮ್ಮ ಒರಿಜಿನಲ್ ವಿದ್ಯುತ್ ನೊಂದಣಿ ಪ್ರತಿ, ಆದಾಯ ತೆರಿಗೆ ಮತ್ತು ಮಾರಾಟ ತೆರಿಗೆ ನೊಂದಣಿ ಪ್ರತಿ, ಕಾಮಗಾರಿ ಮುಗಿಸಿದ ಧೃಢೀಕರಣ ಪತ್ರ ಮತ್ತು ವಹಿವಾಟು ಧೃಢೀಕರಣ ಪ್ರತಿಯನ್ನು ಹಾಜರುಪಡಿಸಿ ಅವುಗಳ ನಕಲನ್ನು ಅರ್ಜಿಯೊಂದಿಗೆ ಸಲ್ಲಿಸಿ ಧೃಢೀಕರಣ ಪಡಿಸಿಕೊಳ್ಳತಕ್ಕದ್ದು. ಬೇರೆಯವರಿಗೆ ಅವಕಾಶ ಇರುವುದಿಲ್ಲ. ಅರ್ಜಿ ಸಲ್ಲಿಸಿದ ಗುತ್ತಿಗೆದಾರರು ಪ್ರೀ ಕ್ವಾಲಿಫೈಯಿಂಗ್ ಟೆಕ್‌ನಿಕಲ್ ಬಿಡ್ ಪರಿಶೀಲನೆ

ದಿನಾಂಕದಂದು ಎಲ್ಲಾ ಮೂಲ ದಾಖಲಾತಿಗಳೊಂದಿಗೆ ಹಾಜರಿ ಇರತಕ್ಕದ್ದು. ಕಳೆದ ಎರಡು ವರ್ಷದ ಅವಧಿಯಲ್ಲಿ ವಾರ್ಷಿಕ ಕನಿಷ್ಠ 150.00 ಲಕ್ಷಗಳ ಆರ್ಥಿಕ ವಹಿವಾಟು ಸಾಧಿಸಿದ ಬಗ್ಗೆ ದಾಖಲೆಗಳನ್ನು ದೃಢೀಕರಿಸಿ ಅರ್ಜಿಯೊಂದಿಗೆ ಸಲ್ಲಿಸತಕ್ಕದ್ದು. ಈ ಕಾಮಗಾರಿಗೆ ನಿರ್ದಿಷ್ಠಪಡಿಸಿದ ಮೊತ್ತದ ಶೇ. 30 ರಷ್ಟು ಮೊತ್ತದ ಇದೇ ತರಹದ ಒಂದೇ ವಿದ್ಯುತ್ ಕಾಮಗಾರಿಯನ್ನು ಅರ್ಜಿದಾರರು ಹಿಂದಿನ ಒಂದು ಆರ್ಥಿಕ ವರ್ಷದಲ್ಲಿ ತೃಪ್ತಿಕರವಾಗಿ ಪೂರೈಸಿರಬೇಕು. ಇದಕ್ಕೆ ಸಂಬಂಧಿಸಿದಂತೆ ಕಾರ್ಯಪಾಲಕ ಅಭಿಯಂತರವರ ದರ್ಜೆಗಿಂತ ಕಡಿಮೆ ಇಲ್ಲದ ಅಧಿಕಾರಿಗಳಿಂದ ದೃಢೀಕರಣ ಪತ್ರವನ್ನು ಒದಗಿಸತಕ್ಕದ್ದು. ಗುತ್ತಿಗೆದಾರರು ಸದರಿ ಕಾಮಗಾರಿಯನ್ನು ನಿರ್ವಹಿಸುವ ಆರ್ಥಿಕ ಸಾಮಾರ್ಥ್ಯದ ಬಗ್ಗೆ ಬ್ಯಾಂಕಿನಿಂದ ಇತ್ತೀಚಿಗೆ ಪಡೆದ ಟೆಂಡರ್‌ಗಿಟ್ಟ ಮೊತ್ತದ ಶೇ. 50 ಕ್ಕಿಂತ ಕಡಿಮೆಯಿಲ್ಲದಂತೆ ಸೂಕ್ತ ದೃಢೀಕರಣ ಪತ್ರ ಲಗತ್ತಿಸತಕ್ಕದ್ದು. ಗುತ್ತಿಗೆದಾರರು ಹೊಂದಿರುವ ತಾಂತ್ರಿಕ ಸಿಬ್ಬಂದಿ ಹಾಗೂ ಅನುಭವದ ಬಗ್ಗೆ ದೃಢೀಕರಣ ದಾಖಲೆಗಳನ್ನು ಒದಗಿಸತಕ್ಕದ್ದು.

7. ಅರ್ಜಿ ಸಲ್ಲಿಸಿದ ಗುತ್ತಿಗೆದಾರರು ಟೆಕ್‌ನಿಕಲ್ ಬಿಡ್‌ನಲ್ಲಿ ಅರ್ಹತೆಯನ್ನು ಪಡೆದವರಿಗೆ ಮಾತ್ರ ಖಾಲಿ ಟೆಂಡರ್ ಫಾರಂ ನೀಡಲಾಗುವುದು, ನಂತರ ನಿಗದಿಪಡಿಸಿದ ದಿನಾಂಕದಂದು ಫೈನಾನ್ಸಿಯಲ್ ಬಿಡ್‌ನ್ನು ಸಲ್ಲಿಸುವುದು.
8. ಖಾಲಿ ಟೆಂಡರ್ ಫಾರಂ ಪಡೆದು, ಭರ್ತಿ ಮಾಡಿ ಸಲ್ಲಿಸಿದ ಗುತ್ತಿಗೆದಾರರು ಟೆಂಡರ್ ತೆರೆಯುವ ದಿನಾಂಕದಂದು ಎಲ್ಲಾ ಮೂಲ ದಾಖಲಾತಿಗಳೊಂದಿಗೆ ಹಾಜರಿ ಇದ್ದು, ಟೆಂಡರ್ ತೆರೆಯುವ ಪ್ರಕ್ರಿಯೆ ಮುಗಿಯುವವರೆಗೂ ಇರತಕ್ಕದ್ದು.
9. ಹೆಚ್ಚಿನ ಮಾಹಿತಿಗಾಗಿ ವಿಶ್ವವಿದ್ಯಾನಿಲಯ ವೆಬ್ ಸೈಟ್ http://www.kuvempu.ac.in ಹಾಗೂ ಕಾರ್ಯಪಾಲಕ ಅಭಿಯಂತರರು, ಕುವೆಂಪು ವಿಶ್ವವಿದ್ಯಾನಿಲಯ ಇವರಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.
10. ಗುತ್ತಿಗೆದಾರರು ಈ ಹಿಂದೆ ಯಾವುದೇ ಕೆಲಸಗಳನ್ನು ಪೂರ್ಣಗೊಳಿಸದೇ ಮಧ್ಯದಲ್ಲಿ ತೊರೆದಿರಬಾರದು ಹಾಗೂ ಸಕಾರಣವಿಲ್ಲದೇ ಯಾವುದೇ ಕಾಮಗಾರಿಗಳನ್ನು ವಿಳಂಭವಾಗಿ ಪೂರೈಸಿರಬಾರದು.
11. ಗುತ್ತಿಗೆದಾರರು ಈ ಕಾಮಗಾರಿ ಟೆಂಡರ್‌ನಲ್ಲಿ ಭಾಗವಹಿಸಿ ಟೆಂಡರ್ ಪಡೆದು ಕಾಮಗಾರಿ ನಿರ್ವಹಿಸಿ ಪೂರ್ಣಗೊಂಡ ನಂತರ ಒಂದು ವರ್ಷದವರೆಗೆ ಅವರ ಸ್ವಂತ ಖರ್ಚಿನಲ್ಲಿ ನಿರ್ವಹಣೆಯನ್ನು ಮಾಡತಕ್ಕದ್ದು.
12. ಈ ಕಾಮಗಾರಿ ಸಂಬಂಧ ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ ಹಾಗೂ ಟೆಂಡರ್ ಫಾರಂ ಬೆಲೆಯನ್ನು ಯಾವುದೇ ಕಾರಣಕ್ಕೂ ಹಿಂತಿರುಗಿಸಲಾಗುವುದಿಲ್ಲ.
13. ಷೆಡ್ಯೂಲ್-ಬಿ ನಲ್ಲಿರುವ ದರಕ್ಕಿಂತ ಕಡಿಮೆ ದರ ನಮೂದಿಸಿದ ಗುತ್ತಿಗೆದಾರರು ಷೆಡ್ಯೂಲ್-ಬಿ ನಲ್ಲಿರುವ ದರ ಹಾಗೂ ನಮೂದಿತ ದರದ ವ್ಯತ್ಯಾಸದ ಮೊಬಲಗನ್ನು ಡಿ.ಡಿ. ಮೂಲಕ ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾನಿಲಯ ಇವರ ಹೆಸರಿಗೆ ಪಡೆದು ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಜ್ಞಾನ ಸಹ್ಯಾದ್ರಿ ಶಾಖೆ, ಶಂಕರಘಟ್ಟ ಇಲ್ಲಿ ಪಾವತಿಯಾಗುವಂತೆ ಪಡೆದು ಭರ್ತಿ ಮಾಡಿದ ಟೆಂಡರ್ ಬುಕ್‌ಲೆಟ್ ಜೊತೆಗೆ ಸಲ್ಲಿಸುವುದು.
14. ಈಗಾಗಲೇ ಈ ಕಛೇರಿ ವತಿಯಿಂದ ಇತರೆ ಕಾಮಗಾರಿಗಳಿಗೆ ಟೆಂಡರ್ ಫಾರಂ ಪಡೆದು ಟೆಂಡರ್ ಸಲ್ಲಿಸದೇ ಇರುವ ಗುತ್ತಿಗೆದಾರರು ಈ ಕಾಮಗಾರಿ ಟೆಂಡರ್ ಫಾರಂ ಪಡೆಯಲು ಅರ್ಹರಿರುವುದಿಲ್ಲ.
15. ನಿಭಂಧನೆಗಳನ್ನು/ಷರತ್ತುಗಳನ್ನೊಳಗೊಂಡ ಟೆಂಡರನ್ನು ತಿರಸ್ಕರಿಸಲಾಗುವುದು.

ಸಹಿ/-

**ಕುಲಸಚಿವರು**